# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ಹಿರಿಯೂರು.

## ಸಿ.ಸಿ ಸಂಖ್ಯೆ: 145/2024

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಲತಾ | ಸಿಡಬ್ಲ್ಯೂ-15 |
| ತಂದೆಯ/ಗಂಡನ ಹೆಸರು | - | ರಂಗಸ್ವಾಮಿ | ಪಿಡಬ್ಲ್ಯೂ-7 |
| ವಯಸ್ಸು | - | ಸು. 35 ವರ್ಷ | ಪ್ರ.ವ.ಬೋ<br>ದಿನಾಂಕ:24.06.2025 |
| ಉದ್ಯೋಗ | - | ಮಹಿಳಾ ಪೊಲೀಸ್ ಪೇದೆ,<br>ಹಿರಿಯೂರು ಗ್ರಾಮಾಂತರ<br>ಪೊಲೀಸ್ ಠಾಣೆ. | |
| ವಾಸ | - | ಹಿರಿಯೂರು. | |

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿ ಯವರಿಂದ:-**

1. ನಾನು 2016 ರಿಂದ ಆಗಸ್ಟ್-2024 ರವರೆಗೆ ಹಿರಿಯೂರು ನಗರ ಪೊಲೀಸ್ ಠಾಣೆಯಲ್ಲಿ ಮಹಿಳಾ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಈ ಪ್ರಕರಣದಲ್ಲಿ ದಿನಾಂಕ:01.11.2022 ರಂದು ಮೃತ ಗಾಯಿತ್ರಿ @ ಗಾಯಿತ್ರಮ್ಮನವರ ಮೃತ ದೇಹದ ಬೆಂಗಾವಲು ಕರ್ತವ್ಯಕ್ಕೆ ನೇಮಕಗೊಂಡಿದ್ದು ಶವ ತನಿಖೆಯ ನಂತರ ಸದರಿ ಶವವನ್ನು ಅವರ ರಕ್ತ ಸಂಬಂಧಿಕರಿಗೆ ಹಸ್ತಾಂತರಿಸಿರುತ್ತೇನೆ. ಅದೇ ದಿನ ಈ ಅಪಘಾತ ನಡೆದ ಸ್ಥಳವಾದ ರಾ.ಹೆದ್ದಾರಿ ಸಂಖ್ಯೆ:150(ಎ) ರ ವೇದಾವತಿ ಕಾಲೇಜು ಬಳಿ ಪಂಚನಾಮೆ ಸಮಯದಲ್ಲಿ ನನ್ನ ಮೊಬೈಲ್‌ನಲ್ಲಿ ಪೋಟೋ ತೆಗೆದು ನಂತರ ಸದರಿ ಪೋಟೋಗಳನ್ನು ಭಾವನಾ ಪೋಟೋ ಸ್ಟುಡಿಯೋದಲ್ಲಿ ಮುದ್ರಣ ಮಾಡಿಸಿ ನಂತರ ಮೊಬೈಲ್‌ನಲ್ಲಿದ್ದ ಭಾವಚಿತ್ರಗಳನ್ನು ಡಿ.ವಿ.ಡಿ. ಗೆ ಹಸ್ತಾಂತರಿಸಿ ಚಾಸಾ-18 ರವರಿಗೆ ನೀಡಿರುತ್ತೇನೆ. ಈ ಪ್ರಕ್ರಿಯೆಯ ಬಗ್ಗೆ ಭಾರತ ಸಾಕ್ಷ್ಯ ಅಧಿನಿಯಮ ಕಲಂ.65(ಬಿ) ರಂತೆ ಪ್ರಮಾಣ ಪತ್ರ ನೀಡಿರುತ್ತೇನೆ. ಸಾಕ್ಷಿ ನೋಡಿ ಗುರುತಿಸಿದ ಪ್ರಮಾಣ ಪತ್ರವನ್ನು **ನಿಪಿ-10** ಎಂದು,

ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-10(ಎ)** ಎಂದು ಗುರುತಿಸಲಾಯಿತು. ಸಾಕ್ಷಿ ನೋಡಿ ಗುರುತಿಸಿದ ಡಿ.ವಿ.ಡಿ.ಯನ್ನು **ನಿಪಿ-11** ಎಂದು ಗುರುತಿಸಲಾಯಿತು. ಈ ಕುರಿತು ತನಿಖಾಧಿಕಾರಿಯ ಮುಂದೆ ಹೇಳಿಕೆ ನೀಡಿರುತ್ತೇನೆ.

**ಪಾಟೀ-ಸವಾಲುಃ ಆರೋಪಿ ಪರ ಶ್ರೀ ಕೆ.ವಿ.ಡಿ. ವಕೀಲರಿಂದಃ-**

3. ನಾನು ಸ್ಥಳ ಪಂಚನಾಮೆಗೆ ಎಷ್ಟು ಹೊತ್ತಿಗೆ ಹೋಗಿರುತ್ತೇನೆ ಎಂದು ನನಗೆ ನೆನಪಿಲ್ಲ. ನಾನು ಮೊಬೈಲ್‌ನಲ್ಲಿ ಪೋಟೋ ತೆಗೆದಾಗ ಸಮಯ ಎಷ್ಟಾಗಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಮೊಬೈಲ್‌ನಲ್ಲಿ ಪೋಟೋ ತೆಗೆದ ಬಗ್ಗೆ ನನ್ನ ಪ್ರಮಾಣ ಪತ್ರದಲ್ಲಿ ನಮೂದು ಆಗಿರುವುದಿಲ್ಲ. ನಾನು ಭಾವನಾ ಸ್ಟುಡಿಯೋದಲ್ಲಿ ಭಾವಚಿತ್ರಗಳನ್ನು ಪ್ರಿಂಟ್ ತೆಗೆಸಿದ ಬಗ್ಗೆ ರಸೀದಿ ಪಡೆದಿರುವುದಿಲ್ಲ. ನಾನು ಪಂಚನಾಮೆ ಸ್ಥಳಕ್ಕೆ ಹೋಗಿಲ್ಲ ಮತ್ತು ಯಾವುದೇ ಭಾವಚಿತ್ರ ತೆಗೆದಿಲ್ಲ ಎಂದರೆ ಸರಿಯಲ್ಲ. ಕಂಪ್ಯೂಟರ್ ಸರಿ ಇತ್ತು ಎಂದು ಹೇಳಲು ನಾನು ಯಾವುದೇ ಪ್ರಮಾಣ ಪತ್ರವನ್ನು ಹೊಂದಿರುವುದಿಲ್ಲ.

4. ಸರಿಯಾಗಿ ಕಾರ್ಯ ನಿರ್ವಹಿಸುತ್ತಿತ್ತು ಎಂದು ಹೇಳುತ್ತಿರುವ ಕಂಪ್ಯೂಟರ್ ಸೀರಿಯಲ್ ಸಂಖ್ಯೆ ಮತ್ತು ಐ.ಪಿ. ಸಂಖ್ಯೆಗಳನ್ನು ನನ್ನ ಪ್ರಮಾಣ ಪತ್ರದಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ. ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಪ್ರಮಾಣ ಪತ್ರ ನೀಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ-ಸವಾಲುಃ 2 ನೇ ಆರೋಪಿ ಪರ ವಕೀಲರು ರ ಮೇಲಿನ ಪಾಟೀ-ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.**

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಹಿರಿಯೂರು.